‘‘ಸುನಯನ, ನೀನು ಈ ಕುರುಡನನ್ನು ಮದುವೆಯಾಗವುದಕ್ಕೆ ಹೇಗೆ ಒಪ್ಪಿಕೊಂಡೆ?’’

ಗಂಟಲನ್ನು ಸರಿಮಾಡಿಕೊಡು ಆಕೆ ತನ್ನ ಆದಿವಾಸಿ ಭಾಷೆಯಲ್ಲಿಯೇ ಹೇಳತೊಡಗಿದಳು...

‘‘ನಾವು ಯಾರ ಬಲವಂತಕ್ಕೂ ಮದುವೆಯಾದವರಲ್ಲ; ಇಷ್ಟಪಟ್ಟು ಮದುವೆಯಾಗಿದ್ದೇವೆ. ಜಾತ್ರೆಯ ಸಂದರ್ಭದಲ್ಲಿ ಹಾಡಿ ಕುಣಿಯುವಾಗ ಇಬ್ಬರೂ ಇಷ್ಟಪಟ್ಟೆವು. ನಮ್ಮ ಗೋತ್ರ ಬೇರೆಯಾಗಿತ್ತು. ಒಂದೇ ಸಮುದಾಯದವರು. ಯಾವುದೇ ಅಡಚಣೆ ಇಲ್ಲವೆಂದುಕೊಂಡು ಬೆಟ್ಟದ ಮೇಲೆ ಓಡಿಹೋಗಿ ಕುಳಿತುಕೊಂಡೆವು. ಇದು ನಮ್ಮಲ್ಲಿ ಒಂದು ಸಂಪ್ರದಾಯ. ಬೆಟ್ಟದ ಕೆಳಗೆ ನಮ್ಮ ತಂದೆ ತಾಯಿಯರು ವಿವಾಹದ ಬಗ್ಗೆ ಚರ್ಚೆ ನಡೆಸಿದರು. ಆದರೆ, ಊರಿನ ಮುಖಿಯಾನ ಮಗ ನನ್ನನ್ನು ಮುವೆಯಾಗುವುದಕ್ಕೆ ಬಯಸಿದ್ದ. ಹಾಗಾಗಿ ನನ್ನನ್ನು ಈತನೊಂದಿಗೆ ವಿವಾಹ ಮಾಡಿಕೊಡುವುದಕ್ಕೆ ನನ್ನ ತಂದೆ ಒಪ್ಪಲಿಲ್ಲ. ಈತ ತುಂಬಾ ಚೆನ್ನಾಗಿ ಹಾಡುತ್ತಾನೆ, ಕುಣಿಯುತ್ತಾನೆ...’’

ತನ್ನ ಬಗ್ಗೆ ಹೇಳುತ್ತ ರೀಟಾಳ ಮುಖ ಗೆಲುವಾಯಿತು. ನಾನೇ ಕೇಳಿದೆ, ‘‘ನಂತರ ನೀವೇನು ಮಾಡಿದಿರಿ?’’

‘‘ಬೆಟ್ಟದ ಮೇಲಿದ್ದ ನಮಗೆ, ಈ ಮದುವೆಗೆ ನನ್ನ ಬಾಬಾ (ತಂದೆ) ಒಪ್ಪುತ್ತಿಲ್ಲವೆಂಬ ವಿಷಯ ತಿಳಿಯಿತು. ಅಲ್ಲಿಂದಲೇ ನಾವಿಬ್ಬರೂ ಓಡಿಹೋಗಿ ಈ ಊರಿಗೆ ಬಂದೆವು.’’

ನನಗೆ ಕುತೂಹಲವಾಗಿತ್ತು. ‘‘ಶಾಲೆಗೆ ಹೋಗಿದ್ದೀರಾ? ಏನು ಓದಿದ್ದೀರಿ?’’

‘‘ನಾವಿಬ್ಬರೂ ಶಾಲೆಗೆ ಹೋದವರಲ್ಲ. ನಮಗೆ ಈ ನಗರದಲ್ಲಿ ಏನು ಕೆಲಸ ಸಿಕ್ಕೀತು? ನನ್ನ ಗಂಡ ಬಸ್ಸಿನ ಹಮಾಲಿ ಕೆಲಸ ಮಾಡುತ್ತಿದ್ದ. ಬಸ್ಸಿನ ಮೇಲೆ ಕುಳಿತೇ ಅಕ್ಕಪಕ್ಕದ ಊರಿಗೂ

